ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ; ಹೊಸ ಕಾರು ತೆಗೆದುಕೊಂಡರೂ ಆಕಸ್ಮಿಕವಾಗುತ್ತದೆ.

ಶ್ರೀ ಎಂ. ಚಿಕ್ಕಲಿಂಗಯ್ಯ —ಲಾರಿ ಡ್ರೈವರುಗಳು ದುರಭ್ಯಾಸ ಮಾಡಿಕೊಂಡು ರಾತ್ರಿಕಾಲದಲ್ಲಿ ಕುಡಿದು ಉದಾಸೀನದಿಂದ ಡ್ರೈವ್ ಮಾಡುವುದರಿಂದ ಹೀಗಾಗುವುದಕ್ಕೆ ಅವಕಾಶವಾಗಿದೆಯಲ್ಲವೆ?

Sri H. SIDDAVEERAPPA.—I have been thinking of having a special Squad to examine all these things. There is the Transport Commission and an A. S. P. is given to its aid; they will tighten up the control.

ಶ್ರೀ ಬಿ. ಹುಚ್ಚೇಗೌಡ.—ಕಾರಿಗೂ ಥರ್ಡ್ ಪಾರ್ಟಿ ಇನ್ಷೂರೆನ್ಸ್ ಮಾಡಬೇಕಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಆಕಸ್ಮಿಕಗಳಿಂದ 69 ಜನ ನತ್ತರೆ, ಒಬ್ಬ ಹುಡುಗನಿಗೆ ಮಾತ್ರ ರೂ. 96-2-0 ಕೊಟ್ಟಿದೆಯೆಂದು ಹೇಳಿದೆ, ಇನ್ನಾರಿಗೂ ಕೊಟ್ಟಿಲ್ಲದಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—ಇನ್ನಾರಿಗೂ ಕೊಟ್ಟಿಲ್ಲವೆಂದು ಹೇಳಿಲ್ಲ. ಆ information not available ಎಂದು ಹೇಳಿದೆ. ಬೇರೆ ಬೇರೆ ಕಂಪೆನಿಗಳಲ್ಲಿ ಇನ್ಷೂರ್ ಮಾಡಿಸಿರುತ್ತಾರೆ. ಆ ಸಮಾಚಾರ ತಿಳಿದುಕೊಳ್ಳಬೇಕು. ಅದನ್ನು ಯಾವ ರೀತಿ ಮಾಡಬೇಕೆಂಬ ವಿಚಾರವನ್ನು ಪರಿಶೀಲಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಪ್ರತಿಯೊಂದು ಆಕಸ್ಮಿಕದಲ್ಲೂ ಗಾಯವಾಗಲಿ ಅಥವಾ ಸಾಯಲಿ, ನೊಂದವರಿಗೆ ಪರಿಹಾರ ಕೊಡುವಂತೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಇದನ್ನು ಪರಿಶೀಲಿಸಿ ಸಂಬಂಧಪಟ್ಟ ರೂಲ್ಸ್ ಸೂಕ್ತರೀತಿ ತಿದ್ದುಪಡಿ ಮಾಡಿ ಒಂದು ವ್ಯವಸ್ಥೆ ಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸರ್ಕಾರಿ ಬಸ್ಸುಗಳಿಗೆಲ್ಲಾ ಇನ್ಷೂರೆನ್ಸ್ ಮಾಡಿಸಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲಕ್ಕೂ ಥರ್ಡ್ ಪಾರ್ಟಿ ಇನ್ಷೂರೆನ್ಸ್ ಮಾಡಿಸಿದ್ದೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸಂಸ್ಥಾನದಲ್ಲಿ ಇನ್ಷೂರೆನ್ಸ್ ಮಾಡಿಸದಿರುವ ಕೆಲವು ಸಂದರ್ಭಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗಿರಕೂಡದು, ಅದು ಕಾನೂನಿಗೆ ವಿರುದ್ಧ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಆ ರೀತಿ ಇನ್ಷೂರೆನ್ಸ್ ಮಾಡಿಸದಿರುವ ಸಂದರ್ಭಗಳು ಗಮನಕ್ಕೆ ಬಂದರೆ ಲೆಕ್ಕ ವಜಾ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಕಾನೂನು ಪ್ರಕಾರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—69 ಜನ ನತ್ತಿರುವಾಗ ಪರಿಹಾರವನ್ನು ವಾರಸುದಾರರಿಗೆ ಕೊಟ್ಟಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಆ ಸಮಾಚಾರ ಗೊತ್ತಿಲ್ಲ. ಡೆಪ್ಯುಟೀ ಕಮೀಷನರಿಗೆ ಬರೆದು ಸಮಾಚಾರ ತರಿಸಿಕೊಂಡು ಟ್ರಾನ್ಸ್‌ಪೋರ್ಟ್ ಕಮೀಷನರು ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—69 ಜನರ ಕಡೆಯವರು ಕರೆನ್ಸ್‌ಪಾಂಡೆನ್ಸ್ ಮಾಡಿದರೂ ಕೂಡ ಏನೂ ಪರಿಹಾರ ನೀಡಿಲ್ಲವೆಂದು ಹೇಳಿದರೆ ಸರಿಯಾದ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅಂಥ ಸಂದರ್ಭಗಳಿದ್ದರೆ ಅಗತ್ಯವಾಗಿ ಪರಿಶೀಲಿಸುತ್ತೇವೆ.

ಶ್ರೀ ಸಿ. ಟಿ. ಹನುಮಂತಯ್ಯ.—ರಾತ್ರಿ ಆರು ಗಂಟೆ ಮೇಲೆ ಲಾರಿಗಳು ತಿರುಗಾಡಕೂಡದು ಎಂದು ನಿರ್ಬಂಧ ಹಾಕಿದ್ದನ್ನು ತೆಗೆದ ಮೇಲೆ ಲಾರಿಗಳಿಂದ ಆಕಸ್ಮಿಕಗಳಾಗುವುದು ಜಾಸ್ತಿಯಾಗಿದೆಯಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಹಿಂದೆ ಆಹಾರ ಪದಾರ್ಥಗಳ ಹತೋಟಿಯಿದ್ದಾಗ ಬೇರೆ ಕಾರಣದಿಂದ ಆ ರೀತಿ ನಿರ್ಬಂಧ ಹಾಕಿತ್ತು. ಈಗ ಹಾಗೆ ಮಾಡುವುದು ಕಷ್ಟ.

ಶ್ರೀ ಸಿ. ಟಿ. ಹನುಮಂತಯ್ಯ.—ಈಗ ಬೆಂಗಳೂರು ಜಿಲ್ಲೆಯಲ್ಲಿ ಲಾರಿ ತೆಗೆದುಕೊಂಡು ಹೋಗಿ ರೈತರು ಬೆಳೆದುದನ್ನು ತುಂಬಿಕೊಂಡು ಹೋಗಿರುವುದು ಸರ್ಕಾರದ ಅವಗಾಹನೆಗೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಅದು ದರೋಡೆ, ಕಳ್ಳತನ. ಹಾಗಾಗಿದ್ದರೆ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಸಿ. ಟಿ. ಹನುಮಂತಯ್ಯ.—ಸಂಜೆ ಆರುಗಂಟೆಯಾದ ಮೇಲೆ ಲಾರಿ ಸಂಚಾರ ಮಾಡುವುದನ್ನು ನಿಲ್ಲಿಸಲಾಗುವುದೆ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಮಾಡಿದರೆ ನಾರ್ಮಲ್ ಟ್ರೇಡ್‌ಗೆ ತೊಂದರೆಯಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಲಾರಿ ಆಕ್ಸಿಡೆಂಟ್ ರಾತ್ರಿ ಹೊತ್ತೇ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ರಾತ್ರಿ, ಹಗಲು ಎರಡು ವೇಳೆಯೂ ಆಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಹೆಚ್ಚು ವೇಗದಲ್ಲಿ ರಾತ್ರಿ ಲಾರಿ ನಡೆಸುವುದರಿಂದ ರಾತ್ರಿ ಆಕ್ಸಿಡೆಂಟ್ ಜಾಸ್ತಿಯಾಗಿ ಆಗುತ್ತಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಹಗಲು ಎಷ್ಟು ಆಕ್ಸಿಡೆಂಟ್ ಆ ಸಂದರ್ಭದಲ್ಲಿ ಆಗಿದೆ, ರಾತ್ರಿ ಎಷ್ಟಾಗಿದೆ ಎಂಬ ಸಮಾಚಾರ ನನ್ನಲ್ಲಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ರಾತ್ರಿ ಸ್ಪೀಡ್ ಚೆಕ್ ಮಾಡುವವರು ಯಾರು?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೆ ಕ್ರೈಮ್ಸ್ ಇನ್‌ಸ್ಪೆಕ್ಟರ್ ಸ್ಕ್ಯಾಡ್ ನೇಮಕಮಾಡಿದೆ.

QUESTIONS FOR ANSWERS ON THE DAY

(but not taken up).

Assistant Superintendents of Police (Policy of P.S.C. in preparation of List).

Q.—227. **Sri R. ANANTARAMAN** (Chamarajpet).—

Will the Government be pleased to state:—

(*a*) whether the Public Service Commission have made a list of Assistant Superintendents of Police;

(*b*) the policy followed by them in the preparation of the list;

(*c*) whether the Government have approved this list?

A.—Sri H. SIDDAVEERAPPA (Minister for Home).—

(*a*) Yes.

(*b*) According to the Public Service Commission, the list of Police Inspectors sent by them is considered suitable for selection as Assistant Superintendents of Police in the order of their relative ranks as shown in the Gradation list.

(*c*) No; the matter is under consideration.

Estimates Committee (Presentation of Report.)

Sri N. C. NAGAIAH REDDY (Chairman).—Sir, I present the III Report of the Estimates Committee. While doing so, I would like to say that the report runs only into very few pages, but all the same, it is a very interesting report. The Committee took much pain to visit almost all the governmental concerns and made detailed study of the working of those concerns. The Committee has made very valuable suggestions to Government as well as to the Management. I now present the Report for the consideration of this House.

Mr. SPEAKER.—Next item.

Estimates Committee.

Motion for Election.

Sri H. SIDDAVEERAPPA (Minister for Home).—Sir, I beg to move that this Assembly do proceed to the election of twelve members to the Committee on Estimates in accordance with sub-rule (2) of rule 137 of the Rules of Procedure and Conduct of Business in the Mysore Legislative Assembly.

Mr. SPEAKER.—The question is:

"That this Assembly do proceed to the election of twelve members to the Committee on Estimates in accordance with sub-rule (2) of rule 137 of the Rules of Procedure and Conduct of Business in the Mysore Legislative Assembly."

The motion was adopted.

Mr. SPEAKER.—The Chair desires to inform the House that for the purpose of election of twelve members to the Committee on Estimates, the Office of the Secretary will be open to receive notice of candidature up to 3 P.M. on Thursday, 5th April 1956 and the election, if necessary, will take place on Friday, 6th April 1956 in the Assistant Secretary's room between the hours 3 P.M. and 5 P.M. The election will be conducted as laid down in rule 137 of the Rules of Procedure and Conduct of Business in the Mysore Legislative Assembly, in accordance with the principle of proportional representation by means of the single transferable vote.

Questions Pending for Answers

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಇನ 120ರಮೇಲೆ ಪ್ರಶ್ನೆಗಳು ಉಳಿದಿವೆ. ಈ ಅಧಿವೇಶನ ಎರಡು ಮೂರು ದಿವಸಗಳಲ್ಲಿ ಮುಕ್ತಾಯವಾಗಲಿದೆ. ಇಲ್ಲಿಯವರೆಗೆ ಆ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಈ ಸಭೆ ಮುಕ್ತಾಯವಾಗುವುದರೊಳಗಾಗಿ ಎಲ್ಲ ಪ್ರಶ್ನೆಗಳಿಗೂ ಉತ್ತರವನ್ನೊದಗಿಸಬೇಕೆಂದು ಪ್ರಾರ್ಥಿಸುತ್ತೇನೆ. ಮಧ್ಯೆ ಕೆಲವು ದಿವಸ ಸಭೆ ನಿಂತ ಪ್ರಯುಕ್ತ ಈಗ ದಿನವೂ ಚರ್ಚೆಗೆ ಬರುವ ಪ್ರಶ್ನೆಗಳ ಸಂಖ್ಯೆಯನ್ನು ಇಪ್ಪತ್ತಕ್ಕೆ ಏರಿಸಿದೆ. ಅದನ್ನು ಇನ್ನೂ ಹೆಚ್ಚು ಮಾಡಿದರೆ ಜಾಗ್ರತೆ ಮುಗಿಯುತ್ತದೆ.

Mr. SPEAKER.—Hon'ble Members are aware that questions were taken up at the rate of 16 a day. Then, on account of the adjourn of the House for a week, we increased it to 20 questions a day. Now, we have received sufficient number of replies for the next three days. Arrangements are made to get replies to others early. We will see that all the questions are disposed of in this session.